**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,**
**ಕುಣಿಗಲ್.**
**ಸಿ.ಸಿ.ನಂ 115/2024**

ಸಿ.ಡಬ್ಲ್ಯೂ -11
ಪಿ.ಡಬ್ಲ್ಯೂ-08

ಸಾಕ್ಷಿದಾರನ ಹೆಸರುಃ- ಭೂಮೇಶ್
ತಂದೆ ಹೆಸರುಃ- ಲೇಟ್ ನಂಜಪ್ಪ
ವಯಸ್ಸುಃ- 60 ವರ್ಷ
ಉದ್ಯೋಗಃ- ನಿವೃತ್ತ ಪಿ.ಎಸ್.ಐ
ವಾಸಃ- ನಾಗವಲ್ಲಿ

**ಸಾಕ್ಷಿಗೆ ದಿಃ 23.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

25.12.2023 ರಿಂದ 31.08.2025 ರವರೆಗೆ ಪಿ.ಎಸ್.ಐ ಎಂದು ಅಮೃತೂರು ಪೋಲಿಸ ಠಾಣೆಯಲ್ಲಿ ಸೇವೆ ಸಲ್ಲಿಸಿರುತ್ತೇನೆ.

ದಿಃ 26.12.2023 ರಂದು ಚಾಸಾ 10 ಅವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಸಾಕ್ಷಿದಾರರು ಹೇಳಿಕೆ ಮತ್ತು ದಾಖಲಾತಿಗಳ ಆಧಾರದ ಮೇರೆಗೆ ಆರೋಪಿತರ ಮೇಲೆ ಆರೋಪ ಸಾಬಿತಾಗಿದ್ದರಿಂದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಆರೋಪಿತರ ಪರ ಪಾಟೀ ಸವಾಲುಃ ಟಿ.ಜಿ.ಟಿಃ ವಕೀಲರಿಂದಃ**

ಈ ಪ್ರಕರಣದಲ್ಲಿ ಡಿ.ವೈ.ಎಸ್.ಪಿ ಅವರ ನೆತೃತ್ವದಲ್ಲಿ ದಾಳಿ ಆಗಿರುವುದಾಗಿ ದೂರಿನಲ್ಲಿ ನಮೂದು ಇದ್ದು ನನ್ನ ತನಿಖಾ ಸಮಯದಲ್ಲಿ ನಾನು ಅವರನ್ನು ವಿಚಾರಣೆ ಮಾಡಿರುವುದಿಲ್ಲ. ನಿ.ಪಿ

3 ರಲ್ಲಿ ಕಿಡಕಿ ಇರುವ ಬಗ್ಗೆ ಏಕೆ ನಮೂದು ಮಾಡಿಲ್ಲವೆಂದು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ವಿಚಾರಣೆ ಮಾಡದೇ ಲಬ್ಯ ಇರುವ ದಾಖಲೆಗಳ ಆಧಾರದ ಮೇರೆಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಪಂಚಾಯಿತಿಯಿಂದ ಪಡೆದ ದಾಖಲಾತಿ ಸರಿ ಇದೆ ಎಂದು ಪರಿಶೀಲಿಸಿ ನಂತರ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದು ಹೇಳುತ್ತಾರೆ. ಖಾತಾ ಎಕ್ಸಟ್ರಾಕ್ಟಅನ್ನು ಪಿ.ಡಿ.ಓ ಅವರ ಸಹಿ ಇದ್ದು ಅಂತಿಮ ವರದಿಯಲ್ಲಿ ಚಾಸಾ 8 ಅವರ ಹುದ್ದೆಯನ್ನು ಎಸ್.ಡಿ.ಎಂ ಎಂದು ನಮಾದು ಮಾಡಿದ್ದು ಈ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ.

ದೂರಿನಲ್ಲಿ 2 ಮನೆಗಳು ಇರುವ ಬಗ್ಗೆ ನಮೂದು ಇದ್ದು ಮಹಜರನಲ್ಲಿ ಮತ್ತು ಎಕ್ಸಟ್ರಾಕ್ಟನಲ್ಲಿ ಖಾಲಿ ಜಾಗವೆಂದು ನಮೂದು ಇದ್ದು ಈ ಬಗ್ಗೆ ನಾನು ಸಾಚಾ 10 ಮತ್ತು ಪಿ.ಡಿ.ಓ ಅವರನ್ನು ವಿಚಾರಣೆ ಮಾಡಿರುವುದಿಲ್ಲ. ಆಸ್ಪತ್ರೆ ಮತ್ತು ಪೋಲಿಸ ಠಾಣೆಯನ್ನು ಹೊರತುಪಡಿಸಿ ಉಳಿದ ಸರ್ಕಾರಿ ಕಚೇರಿಗಳ ಕೆಲಸದ ಸಮಯ ಬೆಳಿಗ್ಗೆ 10 ರಿಂದ 5.30 ಎಂದರೆ ಸರಿ. ಪ್ರಕರಣ 5.45 ಗಂಟೆಗೆ ದಾಖಲಾಗಿದ್ದು ಮಹಜರದಾರರಿಗೆ ನೋಟಿಸ್ ನೀಡಿದ್ದಾರೆಂದು ವಿಚಾರಣೆ ಮಾಡಿರುತ್ತೇನೆ. ಸಂಜೆ 5.45 ಗಂಟೆಯ ಒಳಗೆ ಕಚೇರಿ ಸಮಯದಲ್ಲಿ ಪಂಚರಿಗೆ ನೋಟಿಸ್ ಜಾರಿ ಮಾಡಿರುತ್ತಾರೆಂದು ಹೇಳುತ್ತಾರೆ.

ಉಪ ತಹಸಿಲ್ದಾರ ಅವರಿಗೆ ನೀಡಿದ ನೋಟಿಸ್‌ನಲ್ಲಿ ಸಮಯ ನಮೂದು ಇರುವುದಿಲ್ಲ ಈ ಬಗ್ಗೆ ನಾನು ಎಷ್ಟು ಗಂಟೆಗೆ ನೋಟಿಸ ನೀಡಿರುತ್ತಾರೆಂದು ನಾನು ವಿಚಾರಣೆ ಮಾಡಿರುವುದಿಲ್ಲ.ಮಹಜರನಲ್ಲಿ ಅಕ್ಕ ಪಕ್ಕ ಮತ್ತು ಹಿಂಬಾಗ ಹೊತ್ತೊತ್ತಾಗಿ ಮನೆಗಳು ಇರುವ ಬಗ್ಗೆ ನಮೂದು ಇದ್ದು ಈ ಬಗ್ಗೆ ನಾನು ಚಾಸಾ 10 ಅವರಿಗೆ ವಿಚಾರಣೆ ಮಾಡಿರುವುದಿಲ್ಲ. ಸ್ಥಳೀಯ ಪಂಚರ ಸಹಿಯನ್ನು ಏಕೆ ಪಡೆದಿಲ್ಲವೆಂದು ವಿಚಾರಣೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಸ್ಥಳೀಯ ಪಂಚರ ಸಹಿ ಪಡೆದ ಬಗ್ಗೆ ನಾನು ನೋಡಿಲ್ಲವೆಂದು ಹೇಳುತ್ತಾರೆ.

ಚಾಸಾ 1 ಅವರು ಯಾವುದೆ ವಸ್ತು ಗಳನ್ನು ವಶಪಡಿಸಿಕೊಂಡಿಲ್ಲ ಯಾವುದೇ ದಾಳಿ ಮಾಡಿಲ್ಲ ನಾನು ಠಾಣೆಯಲ್ಲಿ ಕುಳಿತುಕೊಂಡು ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರನ್ನು ಎಲ್ಲಿ ಮಾಡಿದ್ದಾರೆಂದು ನಮೂದು ಇಲ್ಲವೆಂದರೆ ಸಾಕ್ಷಿ ಮನೆಯ ಒಳಗಡೆ ಮಾಡಿದ್ದಾರೆಂದು ಹೇಳುತ್ತಾರೆ. ಮಹಜರನ್ನು ಮನೆಯ ಒಳಗೆಡ ಮಾಡಿದ ಬಗ್ಗೆ ಚಕ್ಕುಬಂದಿ ನಮೂದು ಇರುವುದಿಲ್ಲವೆಂದರೆ ಸರಿ. ಈ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೆ ಸಂಬಂದ ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮಹಜರ ಪಂಚರಿಗೆ ನೀಡಿದ ನೋಟಿಸ್ ನಲ್ಲಿ ದಿನಾಂಕ 17.01.2024 ಎಂದು ನಮೂದು ಇದೆ ಎಂದರೆ ಸರಿ. ನಾವು ಯಾವುದೇ ನೋಟಿಸ್ ನೀಡಿಲ್ಲ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಯಾವುದೇ ತನಿಖೆ ಮಾಡದೆ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.